**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–09)**

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 2022ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ (2002ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣದ (3)ನೇ ಉಪಪ್ರಕರಣದ ಹತ್ತನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ 3.5ರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್ ಮತ್ತು ಒಮ್ಮೆಕ್ರಾನ್ ಪರಿಣಾಮದಿಂದ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು:

ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆಯು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳನ್ನು ಉಪಬಂಧಿಸುವುದಕ್ಕಾಗಿ,-

(i) 2022-23ನೇ ವರ್ಷದಲ್ಲಿ ಆರ್ಥಿಕ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 3.5ರಷ್ಟರವರೆಗೆ ಹೆಚ್ಚಿಸಲು;

(ii) 2022-23ನೇ ವರ್ಷದ ಅವಧಿಯಲ್ಲಿ ಸ್ವೀಕೃತಿಗಳ ಇಳಿಕೆಯ ಕಾರಣದಿಂದಾಗಿ ರಾಜಸ್ವ ಕೊರತೆಯು ಉದ್ಭವಿಸಬಹುದು; ಮತ್ತು

(iii) 2022-23ನೇ ವರ್ಷದ ಒಟ್ಟು ಹೊಣೆಗಾರಿಕೆಗಳು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು;

- ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ (2002ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ

## ಆರ್ಥಿಕ ಜ್ಞಾಪನ ಪತ್ರ

ಸಾಲ ಪಡೆದ ಮೊತ್ತದ ಆಧಾರದ ಮೇಲೆ ಅಸಲು ಮತ್ತು ಬಡ್ಡಿಯಲ್ಲಿ ಹೆಚ್ಚಳ ಉಂಟಾಗುವುದು.

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ

**ಅನುಬಂಧ**

**ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002ರ (2002ರ ಕರ್ನಾಟಕ ಅಧಿನಿಯಮ 16)**

**ಉದ್ಧೃತಭಾಗ**

**XX XX X X**

**4. ಆರ್ಥಿಕ ನಿರ್ವಹಣಾ ತತ್ವಗಳು.-** (1)

**XX XX X X**

(3) ರಾಜ್ಯ ಸರ್ಕಾರವು, ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ,-

(ಎ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗುವ ಮೊದಲನೆ ಆರ್ಥಿಕ ವರ್ಷ ದಿಂದ 2006ರ ಮಾರ್ಚ್ 31ನೇ ದಿನಾಂಕದಂದು ಕೊನೆಗೊಳ್ಳುವ ವರ್ಷದ ವರೆಗಿನ ನಾಲ್ಕು ಆರ್ಥಿಕ ವರ್ಷಗಳ ಅವಧಿಯೊಳಗೆ ರಾಜಸ್ವ ಕೊರತೆಯು ಶೂನ್ಯ ವಾಗುವಂತೆ ಕಡಿಮೆಮಾಡುವುದು;

(ಬಿ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭಿಸಿ ಪ್ರತಿಯೊಂದು ಆರ್ಥಿಕ ವರ್ಷದಲ್ಲಿ, (ಎ) ಖಂಡದಲ್ಲಿ ಹೇಳಿದ ಗುರಿಗೆ ಸುಸಂಗತವಾದ ರೀತಿಯಲ್ಲಿ ರಾಜಸ್ವ ಕೊರತೆಯನ್ನು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇಕಡಾವಾರು ಪ್ರಮಾಣದಂತೆ ಕಡಿಮೆಮಾಡುವುದು;

(ಸಿ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗುವ ಮೊದಲನೇ ಆರ್ಥಿಕ ವರ್ಷದಿಂದ 2006ರ ಮಾರ್ಚ್ 31 ರಂದು ಕೊನೆಗೊಳ್ಳುವ ನಾಲ್ಕು ಆರ್ಥಿಕ ವರ್ಷಗಳ ಅವಧಿಯಲ್ಲಿ ಅಂದಾಜು ಮಾಡಲಾದ ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡಾ ಮೂರರ ಪ್ರಮಾಣಕ್ಕೆ ಹೆಚ್ಚಿಗೆಯಾಗದಂತೆ ಆರ್ಥಿಕ ಕೊರತೆಯನ್ನು ಕಡಿಮೆ ಮಾಡುವುದು;

(ಡಿ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭಿಸಿ ಪ್ರತಿಯೊಂದು ಆರ್ಥಿಕ ವರ್ಷದಲ್ಲಿ, (ಸಿ) ಖಂಡದಲ್ಲಿ ಹೇಳಿದ ಗುರಿಗೆ ಸುಸಂಗತವಾದ ರೀತಿಯಲ್ಲಿ ಆರ್ಥಿಕ ಕೊರತೆಯನ್ನು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇಕಡಾವಾರು ಪ್ರಮಾಣದಂತೆ ಕಡಿಮೆಮಾಡುವುದು;

(ಇ) ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ವಿಧಿಸಲಾದ ಮಿತಿಯನ್ನು ಮೀರುವ ಯಾವುದೇ ಮೊಬಲಗಿಗಾಗಿ ಭದ್ರತೆಯನ್ನು ನೀಡತಕ್ಕದ್ದಲ್ಲ;

(ಎಫ್) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗುವ ಮೊದಲನೆ ಆರ್ಥಿಕ ವರ್ಷದಿಂದ 2015ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಹದಿಮೂರು ಆರ್ಥಿಕ ವರ್ಷಗಳ ಅವಧಿಯೊಳಗೆ, ಕೊನೆಯ ಆರ್ಥಿಕ ವರ್ಷದ ಅಂತ್ಯದಲ್ಲಿ ಒಟ್ಟು ದಾಯಿತ್ವಗಳು ಆ ವರ್ಷದ ಅಂದಾಜು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದನ್ನು ಮೀರದಂತೆ ನೋಡಿಕೊಳ್ಳುವುದು:

(ಜಿ) 2010-11, 2011-12, 2012-13, 2013-14 ಮತ್ತು 2014-15 ಆರ್ಥಿಕ ವರ್ಷಗಳ ಕೊನೆಯಲ್ಲಿ ಬಾಕಿ ಇರುವ ಸಾಲವು ಅನುಕ್ರಮವಾಗಿ ಆ ವರ್ಷಗಳ ಅಂದಾಜು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾ 26.2, ಶೇಕಡಾ 26, ಶೇಕಡಾ 25.7, ಶೇಕಡಾ 25.4 ಮತ್ತು ಶೇಕಡಾ 25.2 ಇರುವಂತೆ ಖಚಿತಪಡಿಸಿಕೊಳ್ಳುವುದು.

ಪರಂತು, ರಾಜಸ್ವ ಕೊರತೆ ಮತ್ತು ಆರ್ಥಿಕ ಕೊರತೆಯು, ರಾಷ್ಟ್ರೀಯ ಭದ್ರತೆಗಾಗಿ ಅಥವಾ ನೈಸರ್ಗಿಕ ವಿಕೋಪಗಳಿಂದಾಗಿ, ರಾಜ್ಯಸರ್ಕಾರದ ಹಣಕಾಸಿನ ಮೇಲೆ ಅನಿರೀಕ್ಷಿತ ಬೇಡಿಕೆಯನ್ನುಂಟುಮಾಡುವ ಕಾರಣ ಅಥವಾ ಕಾರಣಗಳಿಂದಾಗಿ ಈ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಗಳನ್ನು ಮೀರಬಹುದು. ಆದರೆ ನೈಸರ್ಗಿಕ ವಿಕೋಪಗಳಿಂದಾಗಿ ಮಿತಿಗಳನ್ನು ಮಿರಿ ಅಗಿರುವ ಹೆಚ್ಚುವರಿಗಳು, ಆ ವಿಕೋಪಗಳಿಂದ ಆಯಿತೆನ್ನಲಾದ ವಾಸ್ತವಿಕ ಆರ್ಥಿಕ ವೆಚ್ಚವನ್ನು ಮೀರತಕ್ಕದ್ದಲ್ಲವೆಂಬ ಷರತ್ತಿಗೊಳ ಪಟ್ಟಿರಬೇಕು.

ಮತ್ತೂ ಪರಂತು, 2008-09ನೇಸಾಲಿನಲ್ಲಿ ಆರ್ಥಿಕ ಉತ್ತೇಜನದ ಪ್ಯಾಕೇಜಿನ ಒಂದು ಭಾಗವಾಗಿ ಆರ್ಥಿಕ ಕೊರತೆಯು ಈಗಿರುವ ಮಿತಿಯನ್ನು ಅಂದಾಜು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 3.5ರಷ್ಟುರವರೆಗೆ ಮೀರಬಹುದು. ಹಾಗೆ ಸಡಿಲಗೊಳಿಸಿದ ಪರಿಮಿತಿಗಳ ಅಡಿಯಲ್ಲಿ ಪಡೆದುಕೊಂಡ ಹೆಚ್ಚುವರಿ ಮಾರುಕಟ್ಟೆ ಸಾಲಗಳನ್ನು 2008-09ನೇ ವರ್ಷದಲ್ಲಿ ಬಂಡವಾಳ ವೆಚ್ಚಗಳನ್ನು ಕೈಗೊಳ್ಳಲು ಉಪಯೋಗಿಸಿಕೊಳ್ಳತಕ್ಕದ್ದು. ಅನುಸರಣಾ ಕ್ರಮವಾಗಿ ಅಂಥ ಬಂಡವಾಳ ವೆಚ್ಚದ ವಿವರಗಳು ಮತ್ತು ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಉಲ್ಲೇಖಿಸುವ ಒಂದು ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

ಅಲ್ಲದೆ ಪರಂತು, 2009-10ನೇ ಹಣಕಾಸು ವರ್ಷದಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ 4ರಷ್ಟನ್ನು ಮೀರತಕ್ಕದ್ದಲ್ಲ.

ಅಲ್ಲದೇ ಪರಂತು, 2010-11ನೇ ಸಾಲಿನ ಆರ್ಥಿಕ ಕೊರತೆಯು ಹಿಂಜರಿತ ಕ್ರಮಗಳ ಪ್ರತಿಯಾಗಿ ಮಿತಿಯನ್ನು ಮೀರಬಹುದು, ಆದರೆ ಅಂದಾಜು ಮಾಡಲಾದ ರಾಜ್ಯದ ಆಂತರಿಕ ಉತ್ಪನ್ನದ ಶೇ.3.44 ಕ್ಕಿಂತ ಹೆಚ್ಚಿರತಕ್ಕದ್ದಲ್ಲ. ಅನುಸರಣಾ ಕ್ರಮವಾಗಿ ಆ ಮೂಲಕ ತೆಗೆದುಕೊಂಡ ಕ್ರಮಗಳು ಮತ್ತು ವಹಿಸಿದ ವೆಚ್ಚದ ವಿವರಗಳೊಂದಿಗೆ ಒಂದು ವರದಿಯನ್ನು ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

ಮತ್ತು ಪರಂತು, 2020-21ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ.

ಅಲ್ಲದೆ ಪರಂತು, 2020-21ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್ ಸಾಂಕ್ರಾಮಿಕದ ಪರಿಣಾಮ ಸ್ವೀಕೃತಿಗಳು ಕಡಿತಗೊಂಡ ಕಾರಣ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು.

ಮತ್ತು ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ ನಾಲ್ಕರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್-19ರ ಪೂರ್ವದ ಹಂತಗಳಿಗೆ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು:

ಅಲ್ಲದೆ ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆಯು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು.

ಮತ್ತು ಪರಂತು, ಅಂಥ ಕೊರತೆಯ ಮೊಬಲಗು ಮೇಲೆ ಹೇಳಿದ ಮಿತಿಗಳನ್ನು ಮೀರಬಹುದಾದ ಸಂಭಾವ್ಯತೆ ಉಂಟಾದ ತರುವಾಯ ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಕಾರಣ ಅಥವಾ ಕಾರಣಗಳನ್ನು, ಸಂಭವನೀಯ ಹೆಚ್ಚುವರಿಗಳು ಮತ್ತು ಅವುಗಳಿಗೆ ಕಾರಣಗಳನ್ನು ತೋರಿಸುವ ವರದಿಯೊಡನೆ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**XX XX X X**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 17ನೇ ಮಾರ್ಚ್ 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**TWELFTH SESSION**

# THE KARNATAKA FISCAL RESPONSIBILITY (AMENDMENT) BILL, 2022

**(LA Bill No. 09 of 2022)**

A Bill further to amend the Karnataka Fiscal responsibility Act, 2002.

Whereas it is expedient further to amend the Karnataka Fiscal Responsibility Act, 2002 (Karnataka Act 16 of 2002) for the purposes hereinafter appearing;

Be it enacted by the Karnataka State Legislature in the seventy third year of the Republic of India as follows:-

**1. Short title and commencement**.- (1) This Act may be called the Karnataka Fiscal Responsibility ( Amendment) Act, 2022.

(2) It shall come into force with effect from the 1st day of April, 2022.

**2. Amendment of section 4.-** In the Karnataka Fiscal Responsibility Act, 2002 (Karnataka Act 16 of 2002), in section 4, in sub-section (3), after the tenth proviso, the following shall be inserted, namely:-

"Provided also that, the fiscal deficit during the financial year 2022-23 shall not exceed 3.5 percent of estimated Gross State Domestic Product:

Provided also that, during the financial year 2022-23, the State revenue deficit would arise due to slow recovery of the economy from the Covid and Omicron impact."

Provided also that, during the financial year 2022-23, the total liabilities would exceed twenty five percent of the estimated Gross Domestic Product.

## STATEMENT OF OBJECTS AND REASONS

It is considered necessary to amend section 4 of the Karnataka Fiscal Responsibility Act, 2002 (Karnataka Act 16 of 2002):-

(i) to raise the fiscal deficit to 3.5 percent of the estimated Gross State Domestic Product for the year 2022-23;

(ii) revenue deficit would arise due to reduction of receipts for the year 2022-23; and

(iii) total liabilities would exceed twenty five percent of the estimated Gross Domestic Product for the year 2022-23.

Hence, the Bill.

## FINANCIAL MEMORANDUM

There will be increase in principal and interest liability based on the amount that will be borrowed.

**BASAVARAJ BOMMAI**
Chief Minister

**M.K. VISHALAKSHI**
Secretary (I/c)
Karnataka Legislative Assembly

**ANNEXURE**

**THE KARNATAKA FISCAL RESPONSIBILITY ACT, 2002**

**xx xx xx**

**4. Fiscal Management Principles.-**

**XXX XXX XXX**

(3) In particular, and without prejudice to the generality of the foregoing provisions, the State Government shall –

(a) reduce revenue deficit to nil within a period of four financial years beginning from the initial financial year on the 1st day of April, 2002 and ending on the 31st day of March, 2006;

(b) reduce revenue deficit as a percentage of Gross State Domestic Product (GSDP) in each of the financial years beginning on the 1st day of April, 2002, in a manner consistent with the goal set out in clause (a);

(c) reduce fiscal deficit to not more than three per cent of the estimated gross state domestic product within a period of four financial years beginning from the initial financial year on the 1st day of April, 2002 and ending on the 31st day of March, 2006;

(d) reduce fiscal deficit as a percentage of Gross State Demostic Product (GSDP) in each of the financial years beginning on the 1st day of April, 2002 in a manner consistent with the goal set out in clause (c);

(e) not to give guarantee for any amount exceeding the limit stipulated under the Karnataka Ceiling to Government Guarantees Act, 1999 (Karnataka Act 11 of 1999);

(f)ensure within a period of thirteen financial years, beginning from the initial financial year on the 1st day of April, 2002, and ending on the 31st day of March, 2015; that the total liabilities at the end of the last financial year do not exceed twenty five per cent of the estimated gross state domestic product for that year;

(g)ensure that the outstanding debt at the end of financial year 2010-11, 2011-12, 2012-13, 2013-14 and 2014-15 shall be at 26.2 percent, 26 percent, 25.7 percent, 25.4 percent and 25.2 percent respectively of the estimated Gross State Domestic Product for that year;

Provided that revenue deficit and fiscal deficit may exceed the limits specified under this sub-section due to ground or grounds of unforeseen demands on the finances of the State Government due to national security or natural calamity, subject to the condition that the excess beyond limits arising due to natural calamities does not exceed the actual fiscal cost that can be attributed to the calamities;

Provided further that the fiscal deficit during the year 2008-09 may exceed the limit up to 3.5 percent of estimated Gross State Domestic Product as a part of economic stimulus package. The additional market borrowings availed under the limits so relaxed shall be used for undertaking capital expenditure during the year 2008-09. As a measure of compliance an accompanying Report with details and stating the likely impact of such capital expenditure shall be placed before both the Houses of the Legislature

Provided also that the fiscal deficit during the financial year 2009-10 shall not exceed four percent of estimated Gross State Domestic Product.

Provided also that the fiscal deficit during the year 2010-11 may exceed the limit but not more than 3.44 percent of estimated Gross State Domestic Product as a part of counter recessionary measures. As a measure of compliance a report with details of measures taken and expenditure incurred thereby shall be placed before both Houses of the Legislature.

Provided also that, the fiscal deficit during the financial year 2020-21 shall not exceed five percent of estimated Gross State Domestic Product:

Provided also that, during the financial year 2020-21, the State revenue deficit may arise due to reduction of receipts, as a result of Covid Pandemic.

Provided further that the ground or grounds specified in the first proviso shall be placed before the House of Legislature, as soon as may be, after it becomes likely that such deficit amount may exceed the aforesaid limits, with an accompanying report stating the likely extent of excess, and reasons therefore.

Provided also that, the fiscal deficit during the financial year 2021-22 shall not exceed four percent of estimated Gross State Domestic Product:

Provided also that, during the financial year 2021-2022, the State revenue deficit may arise due to slow recovery of the economy to the Pre Covid-19 levels:

Provided also that, during the financial year 2021-22, the total Liabilities may exceed twenty five percent of the estimated Gross State Domestic Product.

**XXX** **XXX** **XXX**

Govt. Press, Vikasa Soudha, Bengaluru, 17th March, 2022, P7, W.D. , Copies 500